# ಚೆನ್ನೈನಲ್ಲಿ ರಾಮಕೃಷ್ಣ ಭಾವಧಾರೆ

ಬ್ರ.ವಿವಿಕ್ತ ಚೈತನ್ಯ

ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾದ ಬೇಲೂರು ಮಠವನ್ನು ಬಿಟ್ಟರೆ ಚೆನ್ನೈನಲ್ಲಿರುವ ರಾಮಕೃಷ್ಣ ಮಠವನ್ನು ಸಂಘದ ಎರಡನೆಯ ಪ್ರಧಾನ ಕೇಂದ್ರ ಎಂದು ಕರೆಯಬಹುದು. ಇದರ ಉಗಮ ಮತ್ತು ಬೆಳವಣಿಗೆಯ ಒಂದು ಕಿರು ಪರಿಚಯವನ್ನು ನೀಡಿದ್ದಾರೆ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದ ಬ್ರ.ವಿವಿಕ್ತ ಚೈತನ್ಯ.

## ಇತಿಹಾಸ ನಿರ್ಮಾಪಕರು

ಇತಿಹಾಸ, ಕಳೆದುಹೋದ ದಿನಗಳ ಮುಖ್ಯವಾದ ಸಂಗತಿಗಳ ಒಂದು ಕ್ರೋಢೀಕರಣ. ಅತ್ಯಂತ ಶ್ರೇಷ್ಠ ವ್ಯಕ್ತಿಯೂ, ಇತಿಹಾಸದಲ್ಲಿ ಒಂದು ಕಡೆ ನಮೂದಿಸಲ್ಪಟ್ಟು ಕಾಲಗರ್ಭದಲ್ಲಿ ಕರಗಿಹೋಗುತ್ತಾನೆ. ಮತ್ತೆ ಕೆಲವರಿರುವರು. ಅವರು ಇತಿಹಾಸ ನಿರ್ಮಾಪಕರು. ಒಂದು ಜನಾಂಗವು ಸಾಗಿಹೋಗುತ್ತಿರುವ ಮಾರ್ಗವನ್ನೇ ಬದಲಾಯಿಸಿ, ಅದ್ಭುತ ಚೈತನ್ಯವನ್ನು ಆ ಸಮುದಾಯಕ್ಕೆ ತುಂಬಿ, ಇತಿಹಾಸದ ಗತಿಯನ್ನೇ ಮಾರ್ಪಡಿಸುವ ಮೇರು ಶಿಖರಗಳವರು. ೧೯ನೆಯ ಶತಮಾನದ ಭಾರತ ಅಂತಹ ಮೂವರು ದಿವ್ಯ ವ್ಯಕ್ತಿಗಳಿಗೆ ಜನ್ಮವಿತ್ತು ಸಾರ್ಥಕತೆಯನ್ನು ಹೊಂದಿತು. ಅವರೇ ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾ ದೇವಿಯವರು ಮತ್ತು ಸ್ವಾಮಿ ವಿವೇಕಾನಂದರು.

## ರಾಮಕೃಷ್ಣ ಮಹಾಸಂಘ


ಶ್ರೀರಾಮಕೃಷ್ಣರ ಪ್ರಮುಖ ಶಿಷ್ಯರಾದ ಸ್ವಾಮಿ ವಿವೇಕಾನಂದರಿಂದ ಸ್ಥಾಪಿತಗೊಂಡ ರಾಮಕೃಷ್ಣ ಮಹಾಸಂಘ ಇಂದು ಜಗದ್ವಿಖ್ಯಾತ. ಭಾರತದ ಹಲವೆಡೆ ಮತ್ತು ಇತರ ನಾಡುಗಳಲ್ಲಿಯೂ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ, ಅಭೂತಪೂರ್ವ ಸೇವೆ ಸಲ್ಲಿಸುತ್ತಿರುವ ಅದರ ಶಾಖೆಗಳು ದಿವ್ಯತ್ರಯರ ಸಂದೇಶಗಳು ಅನುಷ್ಠಾನಗೊಳ್ಳುತ್ತಿರುವ ಪ್ರಯೋಗಾಲಯಗಳೇ ಆಗಿವೆ. ಇಂತಹ ಕೇಂದ್ರಗಳಲ್ಲಿ ಬಹು ಮುಖ್ಯವಾದದ್ದು ಮಹಾಸಂಘದ ಕೇಂದ್ರ ಕಾರ್ಯಾಲಯವಿರುವ **'ಬೇಲೂರು ಮಠ'**. ಸ್ವಾಮಿ ವಿವೇಕಾನಂದರೇ, ಅಲ್ಲಿ ಶ್ರೀರಾಮಕೃಷ್ಣರನ್ನು ಸ್ಥಾಪಿಸಿದರು. ಇದನ್ನು ಬಿಟ್ಟರೆ, ದಕ್ಷಿಣ ಭಾರತದ ರಾಮಕೃಷ್ಣ ಕೇಂದ್ರಗಳೆಲ್ಲದರ ಮಾತೃಸ್ಥಾನವಾಗಿ ಕಂಗೊಳಿಸುತ್ತಿರುವ ಮದ್ರಾಸಿನ (ಈಗಿನ ಚೆನ್ನೈನ) ರಾಮಕೃಷ್ಣ ಮಠವೇ ರಾಮಕೃಷ್ಣ ಮಹಾಸಂಘದ ಸಂನ್ಯಾಸಿವೃಂದಕ್ಕೂ, ಭಕ್ತಸಮುದಾಯಕ್ಕೂ ಹೆಚ್ಚು ಪೂಜನೀಯವಾಗಿರುವುದು.

## ಸ್ವಾಮಿ ವಿವೇಕಾನಂದರು ಚೆನ್ನೈನಲ್ಲಿ

ಸ್ವಾಮಿ ವಿವೇಕಾನಂದರ ಮಹತಿಯನ್ನು ಕಂಡುಕೊಂಡದ್ದೇ ಚೆನ್ನೈನ ಶಿಕ್ಷಿತ ಯುವ ಜನಾಂಗ. ಅವರು ಪಾಶ್ಚಿಮಾತ್ಯ ದೇಶಗಳಲ್ಲಿ ವೇದಾಂತ ಪ್ರಚಾರ ಮಾಡಿ ಭಾರತಕ್ಕೆ ಮರಳಿದ ಮೇಲೆ ಚೆನ್ನೈನಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತ ನೀಡಲಾಯಿತು. ಚೆನ್ನೈನ ಜನತೆಯ ಅದಮ್ಯ ಉತ್ಸಾಹವು ಹಾಗೇ ಆರಿಹೋಗಲು ಬಿಡಬಾರದು, ಇಲ್ಲೊಂದು ವ್ಯವಸ್ಥಿತವಾದ ಕೇಂದ್ರವೊಂದು ಸ್ಥಾಪಿಸಲ್ಪಟ್ಟು ಅದು ಈ ಜನಜಾಗೃತಿಯ ಆಂದೋಳನದ ಸಂಘಟಿತ ಕಾರ್ಯಕ್ಷೇತ್ರವಾಗಬೇಕು ಎಂದು ಚೆನ್ನೈನ ಗಣ್ಯ ವ್ಯಕ್ತಿಗಳು ಬಯಸಿದರು. ಈ ಕಾರ್ಯಕ್ಕೆ ತಮ್ಮ ಸಹೋದರ ಸಂನ್ಯಾಸಿಯೊಬ್ಬರನ್ನು ಕಳುಹಿಸಿಕೊಡಬೇಕೆಂದು ಸ್ವಾಮಿ ವಿವೇಕಾನಂದರನ್ನು ಕೇಳಿಕೊಂಡರು. ಸ್ವಾಮೀಜಿ ನುಡಿದರು: 'ದಕ್ಷಿಣ ಭಾರತದ ಯಾವುದೇ ಸಂಪ್ರದಾಯಸ್ಥ ವ್ಯಕ್ತಿಗಿಂತಲೂ ಹೆಚ್ಚು ಸಂಪ್ರದಾಯಗಳನ್ನು ಪಾಲಿಸುವ ಮತ್ತು ಅದೇ ಸಮಯದಲ್ಲಿ ಅದ್ಭುತ ವ್ಯಕ್ತಿತ್ವವನ್ನು ಒಳಗೊಂಡು, ಭಕ್ತಿ-ಜ್ಞಾನಗಳಲ್ಲಿ ಅಸೀಮನಾದವನನ್ನೇ ನಾನು ನಿಮ್ಮಲ್ಲಿಗೆ ಕಳುಹಿಸುತ್ತೇನೆ.' ಈ ಮಾತುಗಳನ್ನು ಹೇಳುವಾಗ ಸ್ವಾಮೀಜಿಯವರ ಮನಸ್ಸಿನಲ್ಲಿದ್ದ ವ್ಯಕ್ತಿ ಶ್ರೀರಾಮಕೃಷ್ಣರ ಇನ್ನೋರ್ವ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು. ಅವರಿಗೆ ಸ್ವಾಮಿ ವಿವೇಕಾನಂದರೆಂದರೆ ಗುರುದೇವರ ಸಮಾನ. ಅವರ ಮಾತನ್ನು ಶಿರಸಾಪಾಲಿಸುತ್ತ ತಾವರಿಯದ ಭಾಷೆ, ಆಚಾರಗಳುಳ್ಳ ದಕ್ಷಿಣ ಭಾರತಕ್ಕೆ ರಾಮಕೃಷ್ಣ-ವಿವೇಕಾನಂದರ ಸಂದೇಶವಾಹಕರಾಗಿ ಬಂದರು.

## ಚೆನ್ನೈನಲ್ಲಿ ಕಾರ್ಯಾರಂಭ

ರಾಮಕೃಷ್ಣರ ಭಾವಚಿತ್ರವನ್ನು ಸ್ವಾಮಿ ವಿವೇಕಾನಂದರು ಮದ್ರಾಸಿನಲ್ಲಿ ಇದ್ದಾಗ ತಂಗಿದ್ದ **'ಕ್ಯಾಸಲ್ ಕರ್ನನ್'** ಎಂಬ ಕಟ್ಟಡದಲ್ಲಿ, ಪ್ರತಿಷ್ಠಾಪಿಸಿ, ಪೂಜಿಸಲಾರಂಭಿಸಿದರು ಸ್ವಾಮಿ ರಾಮಕೃಷ್ಣಾನಂದರು. ಹೀಗೆ ಚೆನ್ನೈನ ರಾಮಕೃಷ್ಣ ಮಠವು ೧೮೯೭ನೆಯ ಇಸವಿ ಮಾರ್ಚ್ ತಿಂಗಳ ಕಡೆಯ ಭಾಗದಲ್ಲಿ ಆರಂಭವಾಯಿತು. ಆ ಕಟ್ಟಡದ ಮಾಲೀಕರು ಸ್ವಾಮೀಜಿಯವರ ಅನುಯಾಯಿಯಾಗಿದ್ದ ಶ್ರೀ ಬಿಳಿಗಿರಿ ಅಯ್ಯಂಗಾರ್ ಎನ್ನುವವರು. ಮೊದಲ ಹತ್ತು ವರ್ಷಗಳ



ಸ್ವಾಮಿ ರಾಮಕೃಷ್ಣಾನಂದ

ಕಾಲ ಮಠ ಅಲ್ಲೇ ಇತ್ತು. ಆ ಸಮಯದಲ್ಲಿಯೇ, ಶ್ರೀರಾಮಕೃಷ್ಣಾನಂದರು ಇಂದು ಬೃಹದ್ ವೃಕ್ಷದಂತೆ ಬೆಳೆದು ನಿಂತಿರುವ ಪುಣ್ಯಸಂಸ್ಥೆಗೆ ತಮ್ಮ ತ್ಯಾಗ-ಸೇವೆ ಮತ್ತು ಕಾರ್ಯಶಕ್ತಿಗಳ ಭದ್ರ ಅಡಿಪಾಯವನ್ನು ಹಾಕಿದರು.

## ಕಷ್ಟದ ದಿನಗಳು

ದುರದೃಷ್ಟವಶಾತ್ ೧೯೦೬ರಲ್ಲಿ ಆ ಕಟ್ಟಡ ಹರಾಜಿಗೆ ಬಂತು. ಆರ್ಥಿಕ ಸಾಮರ್ಥ್ಯವಿಲ್ಲದೆ ರಾಮಕೃಷ್ಣಾನಂದರಾಗಲೀ, ಇತರ ಭಕ್ತರಾಗಲೀ ಅದನ್ನು ಪಡೆಯಲು ಸಾಧ್ಯವಾಗದೆ, ಪರಭಾರೆಯಾಯಿತು. ಪೂಜಾಗೃಹವನ್ನು ಹತ್ತಿರದ ಸಣ್ಣ ಮನೆಯೊಂದಕ್ಕೆ ಸ್ಥಳಾಂತರಿಸಬೇಕಾಯಿತು. ವಿಧಿಯು ಹೀಗೆ ತಮಗೆ ಕ್ರೂರವಾಗಿದ್ದರೂ ಶ್ರೀ ರಾಮಕೃಷ್ಣಾನಂದರು ಎಳ್ಳಷ್ಟೂ ವ್ಯಥೆಪಡಲಿಲ್ಲ. ಭಕ್ತನಾದವನು ಚಿಂತಿಸಬಾರದು, ವ್ಯಥೆ ಪಡುವುದು ನಮಗೆ ದೇವರಲ್ಲಿ ಭಕ್ತಿ ಇಲ್ಲ ಎನ್ನುವುದರ ದ್ಯೋತಕ ಎಂದು ಅವರು ಹೇಳುತ್ತಿದ್ದರು. ಹೃದಯಾಂತರಾಳದಲ್ಲಿ ಜಗಜಗಿಸುತ್ತಿದ್ದ ಆ ಶ್ರದ್ಧೆಯೇ ಅವರು ಬೆಟ್ಟದಷ್ಟು ಕಷ್ಟಗಳನ್ನು ಎದುರಿಸಿ ಚೆನ್ನೈನಲ್ಲಿ ನೆಲೆಸಿ ಗುರುದೇವರ ಕಾರ್ಯವನ್ನು ಮುಂದುವರಿಸುವಂತೆ ಮಾಡಿತು.


## ಅಸೀಮ ಗುರುಭಕ್ತಿ

ಕೆಲ ಕಾಲದ ನಂತರ ಕೊಂಡಯ್ಯ ಚೆಟ್ಟಿ ಎನ್ನುವ ಭಕ್ತರು, ಕಪಾಲೀಶ್ವರನೆಂಬ ಹೆಸರಿನ ಭಗವಾನ್ ಶಿವನ ಭವ್ಯ ಮಂದಿರವಿರುವ ಮೈಲಾಪುರದಲ್ಲಿ ಜಾಗವೊಂದನ್ನು ದಾನ ಮಾಡಿದರು. ಮನೆ ಮನೆಗೂ ಹೋಗಿ ಹಣವನ್ನು ಸಂಗ್ರಹಿಸಿ, ಒಂದು ಮಹಡಿಯ ಸಣ್ಣ ಕಟ್ಟಡವೊಂದನ್ನು ರಾಮಕೃಷ್ಣಾನಂದರು ಕಟ್ಟಿಸಿದರು. ಆದರೆ ಆ ಕಟ್ಟಡದ ಕಾಮಗಾರಿ ಕಳಪೆಯದಾಗಿತ್ತೆನಿಸುತ್ತದೆ. ಕೆಲಸಮಯದ ನಂತರ ಗೋಡೆಗಳಲ್ಲಿ ಬಿರುಕು ಕಂಡಿತು. ಮಳೆ ಬಂದಾಗ ನೀರು ಸೋರಲಾರಂಭಿಸಿತು. ಒಂದು ರಾತ್ರಿ ಶ್ರೀರಾಮಕೃಷ್ಣರ ಪೂಜಾಗೃಹದಲ್ಲಿ ಗುರುದೇವರ ಭಾವಚಿತ್ರಕ್ಕೆ, ಪ್ರಕೃತಿ ದೇವನು ಅಭಿಷೇಕ ಮಾಡಲಾರಂಭಿಸಿದನು! ಆ ಭಾವಚಿತ್ರ ರಾಮಕೃಷ್ಣಾನಂದರಿಗೆ ಜೀವಂತ ಮೂರ್ತಿಯಾಗಿದ್ದಿತು. ಗುರುದೇವರಿಗೆ ಕೊಡೆ ಹಿಡಿದು ಇಡೀ ರಾತ್ರಿ, ಕಾವಲಿದ್ದರು ಅವರು!

ಕಠಿಣ ಪರಿಶ್ರಮಿಯಾದ ಸ್ವಾಮಿ ರಾಮಕೃಷ್ಣಾನಂದರು ಕೆಲವೊಮ್ಮೆ ವಾರಕ್ಕೆ ೨೦ಕ್ಕೂ ಹೆಚ್ಚು ವೇದಾಂತ ತರಗತಿಗಳನ್ನು ನಡೆಸುತ್ತಿದ್ದರಂತೆ. ಅದೂ ಆ ಮಹಾನಗರದ ವಿಭಿನ್ನ ಜಾಗಗಳಲ್ಲಿ! ಕೆಲವೊಮ್ಮೆ ಒಬ್ಬರಾದರೂ ವಿದ್ಯಾರ್ಥಿ ಇರಬೇಕಲ್ಲ! ಆ ಸಂದರ್ಭದಲ್ಲಿ ಸ್ವಾಮಿಗಳು ತರಗತಿಯ ಅವಧಿಪೂರ್ತಿ ಧ್ಯಾನ ಮಾಡಿ ಬರುತ್ತಿದ್ದರು. ಯಾವುದೇ ಕಾರ್ಯವಿರಲಿ, ಅವರಿಗೆ ಅದು ಗುರುದೇವರಿಗೆ ಸಲ್ಲಿಸುವ ಸೇವೆಯೆ ಆಗಿತ್ತು. ಇತರರ ಪ್ರತಿಕ್ರಿಯೆಗೆ ಎಳ್ಳಷ್ಟೂ ಬೆಲೆ ಕೊಡುವವರಲ್ಲ ಅವರು. ಇಂತಹ ಕಷ್ಟ-ಕಾರ್ಪಣ್ಯಗಳನ್ನು ಅವರ ಆತ್ಮಶಕ್ತಿ ಸಹಿಸಿಕೊಂಡಿತಾದರೂ, ಭೌತಿಕದೇಹ ಕೆಲ ವರ್ಷಗಳ ನಂತರ ಮಣಿಯಿತು. ಘೋರ ಕ್ಷಯರೋಗಕ್ಕೆ ತುತ್ತಾದ ಸ್ವಾಮಿ ರಾಮಕೃಷ್ಣಾನಂದರು ೧೯೧೧ರಂದು ಕಲ್ಕತ್ತೆಯಲ್ಲಿ ಮಹಾಸಮಾಧಿ ಹೊಂದಿದರು.

## ಮುಂದಿನ ಪ್ರಗತಿ

ಇವರ ನಂತರ ಚೆನ್ನೈನ ಮಠದ ಅಧ್ಯಕ್ಷರಾದವರು ಸ್ವಾಮಿ ರಾಮಕೃಷ್ಣಾನಂದರಿಂದಲೇ ತರಬೇತಿ ಹೊಂದಿದ ಸ್ವಾಮಿ ಶರ್ವಾನಂದರು. ಇವರು ಸ್ವಾಮಿ ಬ್ರಹ್ಮಾನಂದರ ಶಿಷ್ಯರು. ಪ್ರಕಾಂಡ ಪಂಡಿತರು. ಇವರ ಕಾಲದಲ್ಲಿಯೇ ಶಿಥಿಲವಾಗಿದ್ದ ಮಠದ ಹಳೆಯ ಕಟ್ಟಡದ ಬದಲಾಗಿ, ಹೊಸ ಕಟ್ಟಡವೊಂದು ನಿರ್ಮಾಣವಾಯಿತು. ಸ್ವಾಮಿ ಬ್ರಹ್ಮಾನಂದರು ೧೯೧೬ರ ಆಗಸ್ಟ್ ೪ರಂದು ಅದರ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಅವರ ಅಮೃತಹಸ್ತದಿಂದಲೇ ೧೯೧೭ರ ಏಪ್ರಿಲ್ ೨೭ರಂದು ಆ ಪೂಜಾಮಂದಿರ ಮತ್ತು ಸಾಧುನಿವಾಸಗಳ ಅನಾವರಣವೂ ಆಯಿತು. ಸ್ವಾಮಿ ಶರ್ವಾನಂದರು ೧೯೧೪ರಲ್ಲಿ 'ವೇದಾಂತ ಕೇಸರಿ' ಎಂಬ ಆಂಗ್ಲ ಮಾಸಿಕವನ್ನು ಆರಂಭಿಸಿದರಲ್ಲದೆ, ಉಪನಿಷತ್ತುಗಳ ಸರಳಾರ್ಥವನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದು ಪ್ರಕಟಿಸಿದರು. ಇವರ ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಸ್ವಾಮಿಗಳೆಂದರೆ ಸ್ವಾಮಿ ಯತೀಶ್ವರಾನಂದ (೧೯೨೬-೩೩), ಸ್ವಾಮಿ ಅಮೃತೇಶ್ವರಾನಂದ (೧೯೩೩-೩೬), ಸ್ವಾಮಿ ಶಾಶ್ವತಾನಂದ (೧೯೩೬-೪೪), ಸ್ವಾಮಿ ಕೈಲಾಸಾನಂದ (೧೯೪೪-೭೧), ಸ್ವಾಮಿ ತಪಸ್ಯಾನಂದ (೧೯೭೧-೯೧) ಮತ್ತು ಸ್ವಾಮಿ ಸ್ಮರಣಾನಂದ (೧೯೯೧-೯೫). ಈಗಿರುವ ಅಧ್ಯಕ್ಷರು ಸ್ವಾಮಿ ಗೌತಮಾನಂದರು. ಮಠದ ಎಲ್ಲಾ ಚಟುವಟಿಕೆಗಳೂ ಸ್ವಾಮಿ ರಾಮಕೃಷ್ಣಾನಂದರಿಂದಲೆ ಆರಂಭಿಸಲ್ಪಟ್ಟವು. ಅವರ



ರಾಮಕೃಷ್ಣಾನಂದರು ಕಟ್ಟಿಸಿದ ಹಳೆಯ ಮಠ

ತಪಸ್ಸಿನ ಫಲವಾಗಿ ಮತ್ತು ಅವರ ನಂತರ ಬಂದ ತ್ಯಾಗಿ ಸಂನ್ಯಾಸಿ ವೃಂದದ ಅವಿರತ ಶ್ರಮ ದಿಂದಾಗಿ ಅವೆಲ್ಲವೂ ಬಹು ದೊಡ್ಡ ರೂಪ ದಲ್ಲಿ ಕಳೆದ ನೂರು ವರ್ಷಗಳಿಗೂ ಹೆಚ್ಚುಕಾಲ ನಡೆದು ಕೊಂಡು ಬಂದಿವೆ. ಅವುಗಳ ಸೂಕ್ಷ್ಮ ಪರಿಚಯವನ್ನು ಕೆಳಗೆ ಮಾಡಿಕೊಡಲಾಗಿದೆ.



ಸ್ವಾಮಿ ಶರ್ವಾನಂದರು ೧೯೧೭ರಲ್ಲಿ ಕಟ್ಟಿಸಿದ ಮಠ

**ದೇವಮಂದಿರ ಮತ್ತು ಪೂಜೆ:** ಪೂಜೆಯ ವಿಷಯದಲ್ಲಿ ಸ್ವಾಮಿ ರಾಮಕೃಷ್ಣಾನಂದರು ಕಟ್ಟಾಸಂಪ್ರದಾಯಸ್ಥರು. ಗುರುದೇವರ ಪೂಜೆಯು ಅವರು ಆರಂಭಿಸಿದ ಪದ್ಧತಿಯ ಹಾಗೆಯೇ ವಿಧ್ಯುಕ್ತವಾಗಿ ಇಂದಿಗೂ ನಡೆದು ಕೊಂಡು ಬಂದಿದೆ. ಮಠದ ಉಳಿದೆಲ್ಲ ಕಾರ್ಯ ಗಳ ಕೇಂದ್ರಬಿಂದು, ಶಕ್ತಿಸಂಚಾಲಕ, ಗುರುದೇವರ ಸನ್ನಿಧಿ. ದೈನಂದಿನ ಪೂಜೆ, ಸಂಜೆಯ ಆರಾತ್ರಿಕ, ಉತ್ಸವಗಳ ಆಚರಣೆ— ಇವೆಲ್ಲವೂ ನಿಯಮಿತವಾಗಿ ಚೆನ್ನೈನ ಮಠದಲ್ಲಿ ನಡೆಯುತ್ತಿವೆ.

**ಯುವಸಂನ್ಯಾಸಿಗಳ ತರಬೇತಿ:** ರಾಮಕೃಷ್ಣ ಮಹಾಸಂಘವನ್ನು ಸೇರಿ, ಸಂನ್ಯಾಸಿ ಬಾಳುವೆ ಬಾಳಲು ಬಯಸಿಬರುವ ಹಲವಾರು ಯುವಕರಿಗೆ ಯೋಗ್ಯವಾತಾವರಣ, ಶಾಸ್ತ್ರಗಳಲ್ಲಿ ಶಿಕ್ಷಣ, ಶಿಸ್ತಿನ ತರಬೇತು ಆವಶ್ಯಕ. ಚೆನ್ನೈಮಠ ಸ್ವಾಮಿ ರಾಮಕೃಷ್ಣಾನಂದರ ಕಾಲ ದಿಂದಲೂ ಇದಕ್ಕೆ ಪ್ರಸಿದ್ಧವಾಗಿದೆ. ಮುಂದೆ ಪ್ರಸಿದ್ಧರಾದ ಹಲವಾರು ಸಂನ್ಯಾಸಿವರೇಣ್ಯರು ಚೆನ್ನೈಮಠದಲ್ಲಿಯೇ ತಮ್ಮ ಸಾಧು ಜೀವನದ ಆರಂಭದ ದಿನಗಳನ್ನು ಕಳೆದರು. ಈಗಲೂ ಹತ್ತಾರು ಯುವಕರು ಪ್ರತಿವರ್ಷ ಚೆನ್ನೈನ ಮಠದಲ್ಲಿ ಸೇರಿಕೊಂಡು ತಮ್ಮ ಸಾಧು ಜೀವನವನ್ನು ಆರಂಭಿಸುತ್ತಾರೆ.

**ಪ್ರವಚನ-ಪ್ರಚಾರ:** ರಾಮಕೃಷ್ಣ-ವಿವೇಕಾನಂದ, ವೇದಾಂತ ಭಾವ ಧಾರೆಯ ಪ್ರಚಾರವನ್ನು ಈ ಮಠದ ಸಂನ್ಯಾಸಿಗಳು ಮೊದಲಿ ನಿಂದಲೂ ಅತ್ಯಂತ ಯಶಸ್ವಿಯಾಗಿ ಕೈಗೊಂಡಿರುವುದನ್ನು ನಾವು ಕಾಣುತ್ತೇವೆ. ಸ್ವಾಮಿ ರಾಮಕೃಷ್ಣಾನಂದರು ದಕ್ಷಿಣ ಭಾರತ ದಾದ್ಯಂತ ಅನೇಕ ನಗರಗಳಿಗೆ ಭೇಟಿಯಿತ್ತು, ಪ್ರವಚನಗಳನ್ನು ಮಾಡಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಯ ಪ್ರಚಾರ ಮಾಡಿದರು. ಇವರ ಪರಿಶ್ರಮದಿಂದಾಗಿಯೇ ಬೆಂಗಳೂರಿನಲ್ಲಿ ರಾಮಕೃಷ್ಣ ಆಶ್ರಮ ೧೯೦೯ರಲ್ಲಿ ಆರಂಭವಾಯಿತು. ಇದಲ್ಲದೆ ದಕ್ಷಿಣ ಭಾರತದ ಹಲವಾರು ಕಡೆಗಳಲ್ಲಿ ಇರುವ ರಾಮಕೃಷ್ಣ ಮಹಾಸಂಘದ ಎಲ್ಲಾ ಶಾಖಾ ಕೇಂದ್ರಗಳೂ ಒಂದಲ್ಲ ಒಂದು ರೀತಿಯಿಂದ ಚೆನ್ನೈ ಮಠದಿಂದ ಪ್ರೇರಣೆ, ಸಹಾಯ ಪಡೆ ದಂಥವುಗಳೇ ಎಂದು ಹೇಳಬೇಕು. ಶಾಖಾ ಕೇಂದ್ರಗಳಲ್ಲದೆ, ಈ ಮಠದ ಸ್ವಾಮಿಗಳ ಮಾರ್ಗದರ್ಶನವನ್ನು ಹೊಂದಿ ಹಲವಾರು ಖಾಸಗಿ ಕೇಂದ್ರಗಳು ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯ ಗಳಲ್ಲಿ ಹುಟ್ಟಿ, ಶೈಕ್ಷಣಿಕ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರ ಗಳಲ್ಲಿ ಅಪಾರ ಸೇವೆ ಸಲ್ಲಿಸುತ್ತಿವೆ. ಇವೆಲ್ಲ ಸಂಸ್ಥೆಗಳೂ ರಾಮ ಕೃಷ್ಣ ಆಂದೋಳನವೆಂಬ ವಿಶ್ವವ್ಯಾಪಿ ಕುಟುಂಬಕ್ಕೆ ಸೇರಿದವುಗಳೇ ಆಗಿವೆ.

**ಶೈಕ್ಷಣಿಕ ಕಾರ್ಯ:** ಸ್ವಾಮಿ ರಾಮಕೃಷ್ಣಾನಂದರು ಅನಾಥ ಬಾಲಕರಿಗಾಗಿ ವಿದ್ಯಾರ್ಥಿನಿಲಯವೊಂದನ್ನು ೧೯೦೫ರ ಫೆಬ್ರವರಿ ೧೭ರಂದು ಆರಂಭಿಸಿ ದರು. ಆ ಸಂಸ್ಥೆಯ ವ್ಯವಸ್ಥಾಪಕರಾಗಿ ಹಲವಾರು ವರ್ಷಗಳ ಕಾಲ ಅಪೂರ್ವ ಸೇವೆಯನ್ನು ಸಲ್ಲಿಸಿದವರು, ಸ್ವಾಮಿ ರಾಮಕೃಷ್ಣಾನಂದರ ಭಕ್ತರಾದ ಶ್ರೀರಾಮಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ ರಾಮಾನುಜಾಚಾರಿ ಅವರು. ಅವರ ಪರಿಶ್ರಮದ ಫಲವಾಗಿ ಅದು ಇಂದು **'ರಾಮಕೃಷ್ಣ ಮಿಷನ್ ಸ್ಟೂಡೆಂಟ್ಸ್ ಹೋಮ್'** ಎಂಬ ಹೆಸರಿನಿಂದ ಪ್ರಸಿದ್ಧವಾಗಿ ಸುಮಾರು ನಾನ್ನೂರಕ್ಕೂ ಹೆಚ್ಚು ನಿರ್ಗತಿಕ ಮತ್ತು ಬಡ ಮಕ್ಕಳಿಗೆ ಉಚಿತ ಆಸರೆ ಮತ್ತು ವಿದ್ಯೆಯನ್ನು ನೀಡುವ ತಾಣವಾಗಿದೆ.

ನಂತರದ ವರ್ಷಗಳಲ್ಲಿ, ಚೆನ್ನೈ ನಗರದ ಹಲವೆಡೆ ಹತ್ತಾರು ಶಾಲೆಗಳು, ದೇಶದಾದ್ಯಂತ ಹೆಸರು ಗಳಿಸಿರುವ **'ವಿವೇಕಾನಂದ ಕಾಲೇಜು'**, ತ್ಯಾಗರಾಯ ನಗರ ಬಡಾವಣೆಯಲ್ಲಿ ಒಂದು ವಿದ್ಯಾರ್ಥಿನಿಲಯ—ಇವೆಲ್ಲವೂ ಸ್ಥಾಪನೆ ಗೊಂಡವು. ಹೆಣ್ಣುಮಕ್ಕಳಿಗಾಗಿಯೇ ಇರುವ **ಶ್ರೀ ಶಾರದಾ ವಿದ್ಯಾಲಯ** ಎಂಬ ಸಂಸ್ಥೆಯೂ ರಾಮಕೃಷ್ಣ ಮಹಾಸಂಘಕ್ಕೆ ಸೇರಿತು. ಒಂದು ಅಂದಾಜಿ ನಂತೆ, ಚೆನ್ನೈ ನಗರ ಒಂದರಲ್ಲಿಯೇ ಸುಮಾರು ೨೦,೦೦೦ ವಿದ್ಯಾರ್ಥಿಗಳು ಮಹಾಸಂಘದ ವಿವಿಧ ಶಾಲಾ-ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

**ಪ್ರಕಾಶನ ಕೇಂದ್ರ:** ಇಂದು ಚೆನ್ನೈ ಮಠ ರಾಮಕೃಷ್ಣ ಮಹಾಸಂಘದ ಅತಿ ದೊಡ್ಡ ಪ್ರಕಾಶನ ಕೇಂದ್ರ. ಸ್ವಾಮಿ ರಾಮಕೃಷ್ಣಾನಂದರು ಸ್ವಾಮಿ ವಿವೇಕಾ ನಂದರ **'ಸ್ಫೂರ್ತಿವಾಣಿ'** (Inspired Talks)ಎಂಬ ಮೊಟ್ಟಮೊದಲ ಪುಸ್ತಕವನ್ನು ಹೊರತಂದರು. ೧೯೦೯ರಲ್ಲಿ ಅವರದೇ ಆದ 'Universe and Man' ಮತ್ತು ೧೯೧೦ರಲ್ಲಿ 'Krishna —Pastoral and King Maker' ಎಂಬ ಪುಸ್ತಕಗಳು ಹೊರಬಂದವು. ೧೯೧೨ರಲ್ಲಿ ಬಂಗಾಲಿಯ 'ರಾಮಕೃಷ್ಣ ಕಥಾಮೃತ'ದ ಪ್ರಥಮ ಭಾಗವು ಆಂಗ್ಲಭಾಷೆಯಲ್ಲಿ 'Gospel of Sri Ramakrishna' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಇದರ ಸಂಪೂರ್ಣ ಅವತರಣಿಕೆ (ಸ್ವಾಮಿ ನಿಖಿಲಾನಂದರಿಂದ ಅನುವಾದಿತವಾದದ್ದು) ೧೯೪೪ರಲ್ಲಿ ಪ್ರಕಾಶಿತವಾಯಿತು. ಸ್ವಾಮಿ ಶಾರದಾನಂದರ ಮೇರುಕೃತಿ **'ಶ್ರೀರಾಮಕೃಷ್ಣ ಲೀಲಾಪ್ರಸಂಗ'**ದ ಇಂಗ್ಲಿಷ್ ಅವತರಣಿಕೆ, 'Sri Ramakrishna The Great Master' ಎಂಬ ಹೆಸರಿನಲ್ಲಿ (ಸ್ವಾಮಿ ಜಗದಾನಂದರಿಂದ ಅನುವಾದಿತವಾದದ್ದು) ೧೯೫೨ರಲ್ಲಿ ಪ್ರಥಮ ಬಾರಿಗೆ ಹೊರ ಬಂದಿತು. ಇವು ಮದ್ರಾಸ್ ಮಠದಿಂದ ಪ್ರಕಟಿತವಾದ ಬಹು ಮುಖ್ಯ



ಗ್ರಂಥಗಳು. ಇವಲ್ಲದೆ ವರ್ಷಗಳು ಕಳೆದಂತೆ ಉಪನಿಷತ್ತು, ಭಗವದ್ಗೀತೆ, ವೇದಾಂತ ಗ್ರಂಥಗಳು ಮತ್ತು ಪ್ರಸಿದ್ಧ ಭಕ್ತಿ ಸ್ತೋತ್ರಗಳ ಇಂಗ್ಲಿಷ್ ಅನುವಾದಗಳನ್ನು ಮಠವು ಹೊರತಂದು ಆಸ್ತಿಕ ಜನತೆಗೆ ಮಹದುಪಕಾರವನ್ನು ಮಾಡಿದೆ. ಪ್ರಕಟನ ಕಾರ್ಯದ ಅದ್ಭುತ ಯಶಸ್ಸಿಗೆ ಕಾರಣರಾದವರು ೧೯೭೧ ರಿಂದ ೧೯೯೧ ರವರೆಗೆ ಅಧ್ಯಕ್ಷರಾಗಿದ್ದ ಸ್ವಾಮಿ ತಪಸ್ಯಾನಂದಜೀ ಅವರು. ಅವರು ಭಗವದ್ಗೀತೆ, ಭಾಗವತ, ಅಧ್ಯಾತ್ಮರಾಮಾಯಣ, ಸುಂದರಕಾಂಡ ಮುಂತಾದ ಶ್ರೇಷ್ಠ ಗ್ರಂಥಗಳ ಅನುವಾದವನ್ನು ಮಾಡಿದರಲ್ಲದೆ ತಮಿಳು ಮತ್ತು ತೆಲುಗು ಭಾಷೆಗಳಲ್ಲಿನ ಪ್ರಕಟನ ಕಾರ್ಯಕ್ಕೆ ತುಂಬ ಉತ್ತೇಜನ ನೀಡಿದರು. ಇದರ ಫಲವಾಗಿ ರಾಮಕೃಷ್ಣ-ವಿವೇಕಾನಂದ, ವೇದಾಂತ ಸಾಹಿತ್ಯದ ಬಹುತೇಕ ಗ್ರಂಥಗಳು ಆ ಭಾಷೆಗಳಲ್ಲಿ ತರ್ಜುಮೆಗೊಂಡವು. ದಿವ್ಯತ್ರಯರ ಸಂದೇಶ ಆ ಭಾಷಾ ರಾಜ್ಯಗಳ ಮೂಲೆ ಮೂಲೆಗೂ ತಲುಪಿತು. ಈಗ ಈ ಕೇಂದ್ರವು ಇಂಗ್ಲಿಷ್, ತಮಿಳು ಮತ್ತು ತೆಲಗು ಭಾಷೆಗಳಲ್ಲಿ ಗ್ರಂಥಗಳನ್ನು ಪ್ರಕಟಿಸುತ್ತಿದ್ದು ತನ್ನದೇ ಆದ ಮುದ್ರಣಾಲಯವನ್ನೂ ಹೊಂದಿದೆ.

**ಪತ್ರಿಕೆಗಳು**: ರಾಮಕೃಷ್ಣ ಮಹಾಸಂಘದಲ್ಲಿ ಮೂರು ಭಾಷೆಗಳ ಮಾಸ ಪತ್ರಿಕೆಗಳನ್ನು ನಿಯಮಿತವಾಗಿ ಹೊರತರುತ್ತಿರುವ ಏಕೈಕ ಕೇಂದ್ರ, ಚೆನ್ನೈ ಮಠ. ೧೯೧೪ರಲ್ಲಿ ಆರಂಭವಾದ ಇಂಗ್ಲಿಷ್ ಮಾಸಿಕ 'ವೇದಾಂತ ಕೇಸರಿ' ವಿದ್ವತ್ಪೂರ್ಣ ಬರಹಗಳಿಗೆ ಹೆಸರುವಾಸಿಯಾಗಿದೆ. ೧೯೨೧ರಲ್ಲಿ ತಮಿಳು ಮಾಸಪತ್ರಿಕೆ 'ಶ್ರೀರಾಮಕೃಷ್ಣ ವಿಜಯಂ' ಆರಂಭವಾಯಿತು. ಅದು ತಮಿಳುನಾಡಿನ ಭಕ್ತಸಮುದಾಯದ ಮನೆಮನೆಗಳನ್ನೂ ಮುಟ್ಟಿದೆ. ಇವರ ೯೦,೦೦೦ಕ್ಕೂ ಹೆಚ್ಚು ಪ್ರತಿಗಳು ವಿತರಣೆಯಾಗುತ್ತಿದ್ದು ರಾಮಕೃಷ್ಣ ಸಂಘದ ಪತ್ರಿಕೆಗಳಲ್ಲಿಯೇ ಒಂದು ಅಭೂತ ಪೂರ್ವ ವಿಕ್ರಮವನ್ನು ಸಾಧಿಸಿದೆ. ತೆಲಗು ಮಾಸಪತ್ರಿಕೆ 'ಶ್ರೀರಾಮಕೃಷ್ಣ ಪ್ರಭ' ೧೯೪೪ರಲ್ಲಿ ಆರಂಭಗೊಂಡು, ಈಗ ೨೦,೦೦೦ಕ್ಕೂ ಹೆಚ್ಚು ಚಂದಾದಾರರನ್ನು ಹೊಂದಿ ಯಶಸ್ಸನ್ನು ಗಳಿಸಿದೆ. ಪತ್ರಿಕೆಗಳ ಈ ಸಾಧನೆಗೆ ಕಾರಣ ಸಂಪಾದಕರಾಗಿರುವ ಸ್ವಾಮಿಗಳ ಅಗಾಧ ವಿದ್ವತ್ತು ಮತ್ತು ಪರಿಶ್ರಮ ಎನ್ನುವುದು ನಿರ್ವಿವಾದ.

**ವೈದ್ಯಕೀಯ ಸೇವೆ**: ಮಠದ ಔಷಧಾಲಯವು ೧೯೨೫ರಿಂದಲೂ ಅವಿರತವಾಗಿ ಬಡಜನರಿಗೆ ತನ್ನ ಸೇವೆಯನ್ನು ಸಲ್ಲಿಸುತ್ತ ಬಂದಿದೆ. ಡಾ.ಜಿ.ಎಸ್. ಖತ್ರೆ ಎಂಬ ಸೇವಾಮನೋಭಾವಿ ವೈದ್ಯರು ಸುಮಾರು ೨೫ ವರ್ಷಗಳ ಕಾಲ ಇದರಲ್ಲಿ ಸೇವೆ ಸಲ್ಲಿಸಿದರು. ಈಗ ಇದು ಅತ್ಯಾಧುನಿಕ ರೋಗ ತಪಾಸಣಾ ಉಪಕರಣಗಳಿಂದ ಸುಸಜ್ಜಿತವಾಗಿದೆ. ಬಡಜನರು ಈ ಉಪಕರಣಗಳ ಪ್ರಯೋಜನವನ್ನು ಅತಿ ಕಡಮೆ ಬೆಲೆಯಲ್ಲಿ ಪಡೆದುಕೊಳ್ಳುತ್ತಿದ್ದಾರೆ. ೧೯೯೬-೯೭ರ ಅಂದಾಜಿನ ಪ್ರಕಾರ ೨,೦೮,೫೫೪ ರೋಗಿಗಳು ಈ ಔಷಧಾಲಯದ ಪ್ರಯೋಜನವನ್ನು ಪಡೆದರು.

**ಪರಿಹಾರಕಾರ್ಯ**: ಪ್ರಾರಂಭದ ದಿನಗಳಿಂದಲೂ, ಚೆನ್ನೈ ಮಠವು ಪ್ರಕೃತಿವಿಕೋಪಕ್ಕೆ ತುತ್ತಾದ ಜನರಿಗೆ ಪರಿಹಾರಕಾರ್ಯವನ್ನು ಒದಗಿಸುತ್ತ ಬಂದಿದೆ. ೧೮೯೭ರಲ್ಲಿ ಬಂಗಾಳ ಪ್ರಾಂತದಲ್ಲಿ ಭೀಕರ ಕ್ಷಾಮ ಬಂದಾಗ, ಸ್ವಾಮಿ ರಾಮಕೃಷ್ಣಾನಂದರು ಮದ್ರಾಸಿನಿಂದ ಹಣ ಸಂಗ್ರಹಿಸಿ ಕಳಿಸಿಕೊಟ್ಟರು. ೧೯೨೪ರಲ್ಲಿ ಚೆನ್ನೈ ಮಠವು ಕೊಯಮತ್ತೂರಿನ ಭವಾನಿ, ಸತ್ಯಮಂಗಲ ಮುಂತಾದ ಜಿಲ್ಲೆಗಳ ಪ್ರವಾಹ ಪೀಡಿತ ಸ್ಥಳಗಳಲ್ಲಿ ಪರಿಹಾರಕಾರ್ಯ ನಡೆಸಿತು. ಹಾಗೆಯೇ, ೧೯೨೭, ೧೯೩೨, ೧೯೪೧ರಲ್ಲೂ ಪ್ರವಾಹ ಪರಿಹಾರ ಕಾರ್ಯಗಳು ವಿವಿಧೆಡೆ ನಡೆದವು. ೧೯೪೮ರಲ್ಲಿ ಮದ್ರಾಸಿನ ಕೊಳಚೆಗೇರಿಯೊಂದರಲ್ಲಿ ಗುಡಿಸಲುಗಳು ಬೆಂಕಿಗೆ ಆಹುತಿಯಾದಾಗ ರಾಮಕೃಷ್ಣಮಠದ ಸ್ವಾಮಿಗಳು ತಮ್ಮ ಕಠಿಣ ಪರಿಶ್ರಮದಿಂದ ಹೌಸ್‌ಕಾಲೋನಿಯೊಂದನ್ನೇ ಕಟ್ಟಿಸಿ ಅಲ್ಲಿ ಸೇವಾಕಾರ್ಯವನ್ನು ಆರಂಭಿಸಿದರು. ಈಗ 'ರಾಮಕೃಷ್ಣಪುರಂ' ಎಂದು ಹೆಸರು ಪಡೆದಿರುವ ಆ ಪ್ರದೇಶದಲ್ಲಿ ಪ್ರಾರ್ಥನಾ ಮಂದಿರವೊಂದು ಇದೆ. ಅಲ್ಲಿನ ಮಕ್ಕಳಿಗೆ ಉಚಿತ ತರಗತಿಗಳು ಮತ್ತು ವಾರಕ್ಕೊಮ್ಮೆ ಆಧ್ಯಾತ್ಮಿಕ ಶಿಕ್ಷಣ ನೀಡಲಾಗುತ್ತಿದೆ. ೧೯೩೦ರಲ್ಲಿ ಕುಷ್ಠ ರೋಗಿಗಳಿಗೆ ಸಹಾಯ ನೀಡುವ ಯೋಜನೆಯೊಂದನ್ನು ನಡೆಸಲಾಯಿತು. ಅಲ್ಲಿಂದೀಚೆಗೆ ಹಲವು ವರ್ಷಗಳು ಅನೇಕ ಜಿಲ್ಲೆಗಳಲ್ಲಿ ಬಿರುಗಾಳಿ ಹಾಗೂ ಪ್ರವಾಹಗಳಿಂದ ಬವಣೆಗೊಂಡ ಸಾವಿರಾರು ಜನರಿಗೆ ಪರಿಹಾರ ಒದಗಿಸಲಾಯಿತು.

೧೯೮೫ರಲ್ಲಿ ಮದ್ರಾಸಿನಲ್ಲಿ ಭಾರೀ ಮಳೆಬಿದ್ದು ಜನ ನಿರ್ಗತಿಕರಾದರು. ಮಠದ ಸಾಧುಗಳು ನಗರದ ಹಲವೆಡೆ ಧಾವಿಸಿ ಸಂತ್ರಸ್ತರಿಗೆ ಆಹಾರ ಮತ್ತು ಔಷಧಿಗಳನ್ನು ಒದಗಿಸಿದರು. ೧೯೯೩ರಲ್ಲಿ ಕನ್ಯಾಕುಮಾರಿ ಜಿಲ್ಲೆಯಲ್ಲಿ ಕೊಯಮತ್ತೂರು ಕೇಂದ್ರದ ಸಹಕಾರದೊಡನೆ ೬೫ ಮನೆಗಳನ್ನು ಕಟ್ಟಿಸಿಕೊಡಲಾಯಿತು. ಹೀಗೆ ಪರಿಹಾರ ಕಾರ್ಯದಲ್ಲೂ ಚೆನ್ನೈ ಮಠ ಮುಂಚೂಣಿಯಲ್ಲಿದೆ.

**ನೂತನ ಶ್ರೀರಾಮಕೃಷ್ಣ ಮಂದಿರ**: ಸ್ವಾಮಿ ವಿವೇಕಾನಂದರು ವಿಶ್ವಾತ್ಮಭಾವವನ್ನು ನಿರೂಪಿಸುವ ಭವ್ಯ ಮಂದಿರವೊಂದು ಚೆನ್ನೈನಲ್ಲಿ ಕಟ್ಟಲ್ಪಡಬೇಕು ಎಂದು ಆಶಿಸಿದ್ದರು. ಅವರ ಕನಸು ಇಂದು ನನಸಾಗಿದೆ. ಸ್ವಾಮಿ ಸ್ಮರಣಾನಂದರು ೧೯೯೧ರಲ್ಲಿ ಅಧ್ಯಕ್ಷರಾಗಿ ಬಂದಮೇಲೆ ಈ ಯೋಜನೆಯ ಶುಭಾರಂಭವಾಯಿತು. ೧೯೯೪ರ ನವೆಂಬರ್ ೩ರಂದು ರಾಮಕೃಷ್ಣ ಮಹಾಸಂಘದ ಆಗಿನ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಭೂತೇಶಾನಂದಜಿ ಅವರು ಈ ಭವ್ಯಮಂದಿರಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಇದೀಗ ಅದು ಸಂಪೂರ್ಣವಾಗಿದ್ದು ಈ ಫೆಬ್ರವರಿ ೭ರಂದು ಅದರ ಮಹಾ ಕುಂಭಾಭಿಷೇಕವು ವಿಜೃಂಭಣೆಯಿಂದ ನಡೆಯಿತು. (ಇದರ ವರದಿಯನ್ನು ಸುದ್ದಿಸಂಚಯದಲ್ಲಿ ಕಾಣಬಹುದು.)

ಹಾಗೆಯೇ ಸ್ವಾಮಿ ವಿವೇಕಾನಂದರ ವಾಸ್ತವ್ಯದಿಂದ ಪುನೀತವಾದ ಕ್ಯಾಸಲ್ ಕರ್ನೆನ್ ಅಥವಾ Ice-house ಕೂಡಾ ಮಠದ ವಶಕ್ಕೆ ಬಂದಿದ್ದು ಅಲ್ಲಿ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ತೋರಿಸುವ ವಸ್ತುಪ್ರದರ್ಶನಾಲಯವೊಂದನ್ನು ಆಯೋಜಿಸಲಾಗಿದೆ. (ಇದರ ವಿವರಗಳನ್ನು 'ವಿವೇಕಪ್ರಭ'ದ ಫೆಬ್ರವರಿ ತಿಂಗಳಿನ ಸುದ್ದಿ ಸಂಚಯದಲ್ಲಿ ಕಾಣಬಹುದು.)

ಹೀಗೆ, ಸ್ವಾಮಿ ರಾಮಕೃಷ್ಣಾನಂದರು ನೆಟ್ಟ ಬೀಜ ಇಂದು ಹೆಮ್ಮರವಾಗಿ ಬೆಳೆದು ಫಲ-ಪುಷ್ಪಭರಿತವಾಗಿ, ಸಾವಿರಾರು ಜನರಿಗೆ ಆಶ್ರಯವನ್ನೀಯುತ್ತಿದೆ. ಅವರು ಹೊತ್ತಿಸಿದ ಹಣತೆ, ಇಂದು ಸೂರ್ಯನೋಪಾದಿ ಎಲ್ಲಕಡೆ ಬೆಳಕು ಚೆಲ್ಲುತ್ತಿದೆ. ಇಂತಹ ಈ ಪವಿತ್ರ ಆಧ್ಯಾತ್ಮಿಕ ಕೇಂದ್ರ ಮುಂಬರುವ ದಿನಗಳಲ್ಲಿ ಇನ್ನೂ ಅಭಿವೃದ್ಧಿ ಹೊಂದಿ ದಕ್ಷಿಣಭಾರತದಲ್ಲಿ ರಾಮಕೃಷ್ಣ ಭಾವಧಾರೆಯ ಪ್ರಚಾರ ಇನ್ನೂ ಯಶಸ್ವಿಯಾಗಿ ಮುಂದುವರಿಸಲೆಂದು ಆಶಿಸುತ್ತೇವೆ. ❈